ಮಾರನೆಯ ದಿನ ಋಗ್ವೇದಿಯವರು ಹೋದಾಗ ಮಾತ್ರೆ ಬರೆದು ಕೊಟ್ಟಿದ್ದರು. ಬೇಕು ಅನ್ನಿಸಿದಾಗ ಮಾತ್ರ ಋಗ್ವೇದಿ ಆ ಮಾತ್ರೆಗಳನ್ನು ನುಂಗುತ್ತಿದ್ದರಲ್ಲದೆ ರೆಗ್ಯುಲರ್ ಆಗಿ ತೆಗೆದುಕೊಳ್ಳುತ್ತಿರಲಿಲ್ಲ. ಓದುಗ ಗೆಳೆಯರೇ, ಋಗ್ವೇದಿಯವರ ಬಗ್ಗೆ ಒಂದಿಷ್ಟು ವಿವರ ಹೇಳುವುದು ಧರ್ಮವೆನಿಸಿ ಹೇಳಿದ್ದೇನೆ. ಏಕೆಂದರೆ, ಕತೆಗಾರರೆನಿಸಿಕೊಂಡವರು ಕಥಾಪಾತ್ರಗಳಿಗೆ, ಅವು ನೆಗೆಟಿವ್ ಪಾತ್ರಗಳಿರಲಿ, ಪಾಸಿಟಿವ್ ಪಾತ್ರಗಳಿರಲಿ ಆಯಾ ಪಾತ್ರಗಳಿಗೆ ತಕ್ಕಂತೆ ಜೀವ ತುಂಬದಿದ್ದರೆ ಕತೆಗೊಂದು ಘನತೆ ಸುಲಭವಾಗಿ ದಕ್ಕುವುದಿಲ್ಲ. ಮತ್ತೆ ಈಗ ನಾವು ಋಗ್ವೇದಿಯವರಲ್ಲಿಗೆ ಹೋಗೋಣ. ಕತೆ ಯಾವ ದಿಕ್ಕಿನಲ್ಲಿ ಚಲಿಸುತ್ತದೋ ಏನೋ, ಯಾರಿಗೆ ಗೊತ್ತು? ಕೆಲವೊಮ್ಮೆ ಪಾತ್ರಗಳು ಕತೆಗಾರರ ಮಾತುಗಳನ್ನು ಕೇಳುವುದಿಲ್ಲ. ಮತ್ತು ಕತೆಗಾರರನ್ನು ತಾವು ಇಷ್ಟ ಪಟ್ಟಂತೆ ಬರೆಯಲು ಪ್ರೇರೇಪಿಸುವುದೂ ಉಂಟು. ನಮ್ಮ ಋಗ್ವೇದಿಯವರದು ಬಹುಶಃ ಅಂಥ ಕ್ಯಾರೆಕ್ಟರ್ ಇರಬಹುದೆಂದು ನನ್ನ ಅನುಮಾನ.

ವಿಡಿಯೊ ಕಾಲ್‌ನಲ್ಲಿ ಇಬ್ಬರು ಮಕ್ಕಳೊಂದಿಗೆ ಮಾತನಾಡಿದ ಮೇಲೂ ಋಗ್ವೇದಿಯವರಿಗೆ ನಿದ್ದೆ ಹತ್ತಲಿಲ್ಲ. ಕ್ಷಣ ತಾನು ಮಕ್ಕಳೊಂದಿಗೆ ಮಾತನಾಡಿದ್ದು ನಿಜವೋ, ಭ್ರಮೆಯೋ ಅನ್ನಿಸಿತ್ತು. ಮಕ್ಕಳ ಮುಖಗಳನ್ನು ನೆನಪು ಮಾಡಿಕೊಂಡರು. ಊಹೂಂ ನೆನಪಾಗಲಿಲ್ಲ. ಲೈಟ್ ಹಾಕಿ ರೂಮಿನಿಂದ ಹಾಲ್‌ಗೆ ಬಂದರು. ಮಕ್ಕಳು ಅಮೆರಿಕಕ್ಕೆ ಹೋದ ಮೂರನೇ ವರ್ಷದಲ್ಲಿ ಹೆಂಡತಿಯೊಂದಿಗೆ ಋಗ್ವೇದಿ ಅಮೆರಿಕಕ್ಕೆ ಹೋಗಿ ತಿಂಗಳ ಕಾಲ ಮಕ್ಕಳ ಮನೆಗಳಲ್ಲಿ ಇದ್ದು ಬಂದಿದ್ದರು. ಆ ಸಂದರ್ಭದಲ್ಲಿ ಮಕ್ಕಳು ತಮ್ಮ ಹೆಂಡತಿಯರೊಂದಿಗೆ ಋಗ್ವೇದಿ ದಂಪತಿಯನ್ನು ಕರೆದುಕೊಂಡು ಸುಮಾರು ಸ್ಥಳಗಳನ್ನು ಸುತ್ತಿಸಿದ್ದರು. ಅನೇಕ ಸ್ಥಳಗಳಲ್ಲಿ ಗ್ರೂಪ್ ಫೋಟೊಗಳನ್ನು ತೆಗೆಸಿಕೊಂಡಿದ್ದರು. ಅವುಗಳಲ್ಲಿ ಪ್ರಮುಖವಾಗಿ ಲಿಬರ್ಟಿ ಸ್ಟ್ಯಾಚ್ಯು ಮುಂದೆ ಮತ್ತು ನಯಾಗರ ಜಲಪಾತಗಳ ಮುಂದೆ ತೆಗೆಸಿಕೊಂಡಿದ್ದ ಫೋಟೊಗಳನ್ನು ಎನ್‌ಲಾರ್ಜ್ ಮಾಡಿಸಿ, ಲ್ಯಾಮಿನೇಷನ್ ಮಾಡಿಸಿ ಹಾಲಿನಲ್ಲಿ ಗೋಡೆಗೆ ನೇತುಹಾಕಿಸಿದ್ದರು. ಋಗ್ವೇದಿಯವರು ಎರಡು ಗಂಟೆ ರಾತ್ರಿಯಲ್ಲಿ ತೀರಾ ಹತ್ತಿರಕ್ಕೆ ಹೋಗಿ ಫೋಟೊಗಳನ್ನು ನೋಡಿದ್ದರು. ದೇಹಗಳು ಬೆಳೆದಂತೆ, ಬದಲಾವಣೆಗಳಾದಂತೆ ಮನಸ್ಸು, ಹೃದಯಗಳೂ ಬದಲಾಗುತ್ತವಲ್ಲ... ಏನೋ ವಿಶಿಷ್ಟವಾದ ಸಂಗತಿಯನ್ನು ಕಂಡು ಹಿಡಿದವರಂತೆ ಋಗ್ವೇದಿ ನಕ್ಕು ತಿರುಗಿ ಬಂದು ಹಾಸಿಗೆಯ ಮೇಲೆ ಉರುಳಿಕೊಂಡಿದ್ದರು. ಫೋಟೊದಲ್ಲಿರುವವರು ಹಂಡ್ರೆಡ್ ಪರ್ಸೆಂಟ್ ತನ್ನ ಮಕ್ಕಳಾದರೂ ವಿಡಿಯೊ ಕಾಲ್‌ನಲ್ಲಿ ಮಾತನಾಡಿದವರು ಬಹುಶಃ ತನ್ನ ಮಕ್ಕಳಿರಲಾರರೆಂಬ ಗುಮಾನಿಗೆ ಬಿದ್ದರು. ಈ ನಾಲ್ಕು ದಿನದಿಂದ ನಡೆದ ಕೆಲವು ಘಟನೆಗಳು ಬೇಡ ಬೇಡವೆಂದರೂ ಋಗ್ವೇದಿಯವರ ಮನಃಪಟಲದ ಮೇಲೆ ಮೂಡಲಾರಂಭಿಸಿದ್ದವು.

ಕಳೆದ ಭಾನುವಾರದಿಂದಲೂ ಋಗ್ವೇದಿ ಪ್ರತಿನಿತ್ಯ ಕ್ಲಬ್ಬಿಗೆ ಹೋಗುತ್ತಿದ್ದಾರೆ. ನಿವೃತ್ತಿಯಾದ ವರ್ಷದಲ್ಲೇ ಇಬ್ಬರು ಮಕ್ಕಳೂ ಇಲ್ಲಿಗೆ ಬಂದಾಗ ತಲಾ ಒಂದೊಂದರಂತೆ ಎರಡು ಪ್ರತಿಷ್ಠಿತ ಕ್ಲಬ್ಬುಗಳ ಮೆಂಬರ್‌ಶಿಪ್ ಕೊಡಿಸಿದ್ದರು. ಋಗ್ವೇದಿ ಒಂದು ವಾರ ಒಂದು ಕ್ಲಬ್ಬಿಗೆ ಹೋದರೆ, ಮತ್ತೊಂದು ವಾರ ಇನ್ನೊಂದು ಕ್ಲಬ್ಬಿಗೆ ಹೋಗುತ್ತಿದ್ದರು. ಎರಡೂ ಕ್ಲಬ್ಬುಗಳಲ್ಲೂ ಸುಮಾರು ಜನ ಬಿಸಿನೆಸ್‌ಮನ್‌ಗಳು, ರಾಜಕಾರಣಿಗಳು, ಐಎಎಸ್ ಅಧಿಕಾರಿಗಳು ಸ್ನೇಹಿತರಾಗಿದ್ದರು. ಕ್ಲಾಸ್‌ಮೇಟ್‌ಗಳು, ಸಹೋದ್ಯೋಗಿಗಳೂ ಕೂಡಾ ಆಗಾಗ ಭೇಟಿಯಾಗುತ್ತಿದ್ದರು. ಋಗ್ವೇದಿಗೆ ಎರಡೂ ಕ್ಲಬ್ಬಗಳಲ್ಲೂ ಒಂದು ಸಾಮಾನ್ಯ ಸಂಗತಿ ಕಣ್ಣಿಗೆ ಬಿದ್ದಿತ್ತು. ಅದೇನೆಂದರೆ ಸುಮಾರು ಇಪ್ಪತ್ತು ಜೋಡಿ ವೃದ್ಧ ದಂಪತಿಗಳು ಮಧ್ಯಾಹ್ನ ಒಂದು ಗಂಟೆಗೆ ಕ್ಲಬ್ಬಿಗೆ ಬಂದು ಊಟ ಮಾಡಿ ಸಂಜೆವರೆಗೂ ಅಲ್ಲೆ ಕಾಲ ಕಳೆದು, ರಾತ್ರಿ ಎಂಟು ಗಂಟೆಗೆ ಮತ್ತೆ ಊಟ ಮಾಡಿ ಮನೆಗಳಿಗೆ ಹಿಂತಿರುಗುತ್ತಿದ್ದರು. ಋಗ್ವೇದಿಯಂತೆ ಒಂಟಿ ವ್ಯಕ್ತಿಗಳು ಕೂಡಾ ಬರುತ್ತಿದ್ದರು. ಅಂಥವರ ಮಕ್ಕಳು ವಿದೇಶದಲ್ಲಿ ನೆಲೆಸಿರುವುದೇ ಅವರ ಇಂಥ ಪ್ರತಿನಿತ್ಯದ ದಿನಚರಿಗೆ ಕಾರಣವಾಗಿತ್ತು. ಆದರೆ, ಋಗ್ವೇದಿಯವರಿಗೆ